
REVIEW OF LITERATURE

ISSN: 2347-2723
IMPACT FACTOR : 2.0260 (UIF)
VOLUME - 4 | ISSUE - 12 | JULY - 2017

# ಕಂಬಾರರ 'ಮಹಾಮಾಯಿ'ಯ ಪಾತ್ರಗಳ ಅಭ್ಯಾಸ



**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**

ಕನ್ನಡ ಸಾಹಿತ್ಯದ ಎಂಟನೇಯ ಜ್ಞಾನಪೀಠ ಪ್ರಶಸ್ತಿ ತೆಗೆದುಕೊಂಡ ಡಾ.ಚಂದ್ರಶೇಕರ ಕಂಬಾರರ ವ್ಯಕ್ತಿತ್ವ ಶಬ್ದಕ್ಕೆ ನಿಲುಕುವುದಿಲ್ಲ. ಮಾತಿಗೆ ಸಿಲುಕುವುದಿಲ್ಲ. ಕನ್ನಡ ಸಾಹಿತ್ಯ ಲೋಕ ಕಂಡ ಬಹುದೊಡ್ಡ ಪ್ರತಿಭೆ. ಸುಮಾರು ಅರವತ್ತಕ್ಕಿಂತ ಹೆಚ್ಚು ಕೃತಿಗಳು ರಚಿಸಿದ್ದಾರೆ. ನಾಟಕ, ಕಾದಂಬರಿ, ಕಥೆಗಳು ಒಂದೊಂದು ಸಂಸ್ಕೃತಿಯನ್ನು ಬಿಚ್ಚಿಡುತ್ತೇವೆ. ಸಮಾಜದಲ್ಲಿ ಸಂಕಷ್ಟಕ್ಕೆ ಬಲಿಯಾದವರ ಕಥೆಗಳು ಮುಚ್ಚಿಹೋಗಿವೆ. ಆದರೆ ಕಂಬಾರರು ಅಂಥ ಕತೆಗಳಿಗೆ ಹೊಸ ಆಯಾಮವನ್ನು ನೀಡುತ್ತಾರೆ. ಯಾವ ಮುಲಾಜಿಗೂ ಒಳಗಾಗದೆ ಕಥೆಯ ಪಾತ್ರಗಳಲ್ಲಿ ಬೆರೆತು ಮಾತನಾಡುತ್ತಾರೆ. ಮಾನವ ಪ್ರವೃತ್ತಿಗಳ ಸಹಜ ಅಭಿವ್ಯಕ್ತಿಯನ್ನು ಇವರ ಪಾತ್ರಗಳಲ್ಲಿ ಕಾಣಬಹುದು. ಜೀವನವನ್ನು ಯಥಾವತ್ತಾಗಿ ನೋಡುವ, ಅನುಭವಿಸುವ ಕಲೆಕರಗತವಾಗಿದೆ. ಇಲ್ಲಿ ಬರುವ ಮಹಾಮಾಯಿ ನಾಟಕದ ನಾಯಕ ಸಂಜೀವಶಿವನ ಮಾತು ನಿಷ್ಠುರವಾದರು ಸತ್ಯವೆನಿಸುತ್ತದೆ. ಶೆಟಿವಿತಾಯಿಯ ಆಜ್ಞೆ ಮೀರಿ ರಾಜಕುಮಾರಿಗೆ ವೈದ್ಯಮಾಡುವುದು ಪ್ರತಿಭಟನೆ ಸಂಕೇತವಾಗಿದೆ. ಮನುಷ್ಯನಾದವನು ದಬ್ಬಾಳಿಕೆಗೆ ಒಳಗಾಗದೆ ಇರುವುದು ಆತನ ಮೂಲಭೂತ  ಲಕ್ಷಣ. ದೇವರ ದಬ್ಬಾಳಿಕೆಯಂತೆ ಶೆಟಿವಿತಾಯಿಯ ಆಶೀರ್ವಾದ ಕಂಡರು ಆ ವರವನ್ನು ನಯವಾಗಿಯೇ ತಿರಸ್ಕರಿಸಿ ತಾನು ಸ್ವತಂತ್ರ ವೈದ್ಯಮಾಡಲು ಇಚ್ಛಿಸುತ್ತಾನೆ. ಇಲ್ಲಿ ಬರುವ ಪಾತ್ರಗಳು, ಕ್ರಿಯಾತ್ಮಕ ತುಡಿತಕ್ಕನುಗುಣವಾಗಿ ಯಾವ ಕೃತಕತೆಯೂ ಇಲ್ಲದೆ ಬದುಕುವಂಥವರು. ಇಲ್ಲಿ ಬರುವ ಪ್ರಮುಖ ಪಾತ್ರಗಳ ಅಭ್ಯಾಸದ ಮೂಲಕ ನಾಟಕದ ಅಂತರಾರ್ಥವನ್ನು ಅರಿತುಕೊಳ್ಳುವ ಪ್ರಯತ್ನ ಲೇಖನದ ಉದ್ದೇಶ.

**1 ಸಂಜೀವ ಶಿವ :** ನಾಟಕದ ಸೂತ್ರಧಾರ ಮತ್ತು ಈ ನಾಟಕದ ನಾಯಕ. ಸಂಜೀವಶಿವನ ಸುತ್ತ ಈ ನಾಟಕ ಹೆಣೆಯುತ್ತಾ ನಡೆಯುತ್ತದೆ. ಸಂಜೀವಶಿವ ಕೀರ್ತಿಶಿವನ ಮಗ, ತಂದೆತಾಯಿಗಳನ್ನು ಕಳೆದುಕೊಂಡು ಶೆಟಿವಿತಾಯಿಯ ಪಾಲನೆಯಲ್ಲಿ ಬೆಳೆದವನು, ಇತನದು ವೈದ್ಯವೃತ್ತಿ **"ಗಿಡಮೂಲಿಕೆ ನಾರು ಬೇರಿನ ಗುಣಸ್ವಭಾವಂಗಳ ವಶೀಕರಿಸಿಕೊಂಡು ದೊಡ್ಡ ಸಾಧನೆಗಳ ಮಾಡಿ ನಾಲ್ಕು ದಿಕ್ಕುದೆಶೆಗಳಲ್ಲಿ ನಾಲ್ಕಾರು ಚಂದದ ವಿಶೇಷಣಗಳಿಂದ ಕೀರ್ತಿವಂತನಾಗಿದ್ದಾನೆ"**[1] ರೋಗಿಯ ಬಲಗಡೆ ತಾಯಿ ಬಂದರೆ ಈತ ವೈದ್ಯ ಮಾಡುತ್ತಾನೆ ರೋಗಿಯ ಎಡಗಡೆ ತಾಯಿ ಬಂದರೆ ದಮ್ಮಯ್ಯ ಅಂದರು ವೈದ್ಯಮಾಡುವುದಿಲ್ಲ. ಈ ನಿಯಮದ ಪ್ರಕಾರ ತಾಯಿ ಮಗನಿಗಿತ್ತ ವರವಾಗಿದೆ.

ರೋಗಗ್ರಸ್ತಳಾದ ಸಾವಿನಂಚಿನಲ್ಲಿರುವ ರಾಜಕುಮಾರಿಯನ್ನು ತಾಯಿ ವಿರೋಧಿಸಿದರು ವೈದ್ಯಮಾಡುತ್ತಾನೆ. ಈ ಘಟನೆಯಿಂದ ಶೆಟಿವಿತಾಯಿ ಕೋಪಿಷ್ಠಳಾಗುತ್ತಾಳೆ. ರಾಜಕುಮಾರಿಯನ್ನು ಬಲಿ ತೆಗೆದುಕೊಳ್ಳಬೇಕು ಎನ್ನುವ ಅವಳಿಗೆ ಇವನ ವೈದ್ಯವೃತ್ತಿ (ತಾನಿತ್ತವರ) ಅಡ್ಡಬರುತ್ತದೆ. ನನ್ನ ಅಪ್ಪಣೆ ಇಲ್ಲದೆ ರಾಜಕುಮಾರಿಗೆ ಮದ್ದುಕೊಟ್ಟು ದೈವ ಸಂಕಲ್ಪಕ್ಕೆ ಸವಾಲು ಹಾಕಿರುವೆ ಮೊದಲದನ್ನು ಹಿಂತೆಗೆದುಕೊ **"ಸಂಜೀವಶಿವ: ರಾಜಕುಮಾರಿ ಜೀವ ನಿನ್ನ ಕೈಲಿದೆ. ನನ್ನ ಭವಿಷ್ಯ ಅವಳ ಕೈಲಿದೆ ! ವಿಚಿತ್ರವಲ್ಲವೆ? ಅವಳ ಕಣ್ಣ ಬೆಳಕನ್ನ ನಂದಿಸಬೇಡ ತಾಯೇ"** ಎಂದು ಹೇಳಿದರು ತಾಯಿ ಕೇಳುವುದಿಲ್ಲ. ಇವು ಎಲ್ಲಾ ನಿನ್ನ ಪ್ರೇಮದಾಟ ಎಂದು ನುಡಿಯುತ್ತಾಳೆ. ಅವಳ ರೂಪಕ್ಕೆ ಮಾರು ಹೋಗುತ್ತಾನೆ. ರಾಜಕುಮಾರಿಯು ಈತ ಕಟ್ಟಿದ ಗಿಡಮೂಲಿಕೆಯ ಬಳ್ಳಿಯ ಹಾರವನ್ನು ಮಾಂಗಲ್ಯವೆಂದೆ ತಿಳಿದು ಇತನನ್ನು ಪತಿ ಎಂದು ನಿರ್ಧರಿಸುತ್ತಾಳೆ. ನಾಟಕ ಮುಗಿಯುವ ಸಂದರ್ಭದಲ್ಲಿ ಸಂಜೀವಶಿವ ತನ್ನ ಬುದ್ಧಿ ಕುಶಲತೆಯಿಂದ ರಾಜಕುಮಾರಿಯನ್ನು ಬದುಕಿಸುತ್ತಾನೆ. ತನ್ನ ವೈದ್ಯವೃತ್ತಿಯ ಸ್ವತಂತ್ರತೆಯನ್ನು ಕಾಣುತ್ತಾನೆ.

**2 ಶೇಟವಿತಾಯಿ :** ನಾಟಕದ ಪ್ರಥಮದಲ್ಲಿ ಶೆಟವಿತಾಯಿ ಮಹಿಮೆಯನ್ನು ಹೇಳುತ್ತಾ

"ಶೆಟವಿತಾಯಿ ಅಂದರೆ ಸಾವಿನ ದೇವತೆ
ನಾವು ನೀವು ಅಷ್ಟೇ ಅಲ್ಲ ದೇವರು ಹೆದರುವ ಆದರೂ ನಿವಾರಿಸಲಾಗದ ಅಂತಿಮಗುರಿ
ಬೆಟ್ಟ ಬೆಟ್ಟಗಳಲ್ಲಿ ಗುಡಿ ತಾಯಿಗೆ
ನಮ್ಮ ಬೆಟ್ಟದ ಒಳಗೂ ಗುಡಿ ಶೆಟವಿಗೆ
ದಿಕ್ಕು ದಕ್ಕಿಗೆ ಒಂದು ಹೆಸರವಳಿಗೆ
ನಮ್ಮ ದಿಕ್ಕಿನವಳು ಶೆಟವಿಮಾಯಿ"3

ಶೆಟವಿತಾಯಿ ಸಾವಿನ ಅಧಿದೇವತೆ, ಸಂಜೀವಶಿವನಿಗೆ ವರವನಿತ್ತಿದ್ದಾಳೆ. ಅದೇನೆಂದರೆ **"ಸಂಜೀವಶಿವ ರೋಗಿಯ ನಾಡಿ ಮಿಡಿತವ ನೋಡುವಾಗ ರೋಗಿಯ ಎಡಕ್ಕೆ ಇಲ್ಲವೆ ಬಲಕ್ಕೆ ತಾಯಿ ಪ್ರತ್ಯಕ್ಷಳಾಗುತ್ತಾಳೆ ತಾಯಿ ಹೀಗೆ ಅನುಗ್ರಹಿಸುವಾಗ ಸಂಜೀವ ಮತ್ತು ನನ್ನ ವಿನಾ ಇನ್ನೊಬ್ಬರಿಗೆ ಕಾಣುವುದಿಲ್ಲ. ರೋಗಿಯ ಬಲದಲ್ಲ ಪ್ರತ್ಯಕ್ಷವಾದರೆ ವೈದ್ಯಮಾಡುತ್ತಾನೆ. ಎಡದಲ್ಲ ಪ್ರತ್ಯಕ್ಷವಾದರೆ ದಮ್ಮಯ್ಯ ದಯವಾಗು ಶಿವನೇ ಎಂದರೂ ಸಂಜೀವ ರೋಗಿಗೆ ವೈದ್ಯಮಾಡುವುದಿಲ್ಲ. ಇದು ತಾಯಿ ಮಗನಿಗೆ ಕೊಟ್ಟವರ"**[4].

ಈ ನಿಯಮ ನಿಬಂಧನೆಗಳ ನಡುವೆ ಸಂಜೀವಶಿವ ರಾಜಕುಮಾರಿಗೆ ನಾಡಿ ನೋಡಿ ವೈದ್ಯಮಾಡುತ್ತಾನೆ. ಶೆಟವಿತಾಯಿ ಈ ಇಬ್ಬರಿಗೂ ವಿಧ ವಿಧವಾಗಿ ಕಾಡಿಸುತ್ತಾಳೆ. ಆದರೆ ಕೊನೆಗೆ ದೈವಿಶಕ್ತಿಗೆ ಸೋಲಾಗುತ್ತದೆ.

**3 ರಾಜಕುಮಾರಿ :** ಅಸ್ವಸ್ಥ ರಾಜಕುಮಾರಿ ನೂರೆಂಟು ರೋಗಗಳಿಂದ ಬಳಲುತ್ತಿದ್ದಾಳೆ. ಇಡೀ ಸಾಮ್ರಾಜ್ಯದಲ್ಲಿನ ಎಲ್ಲಾ ವೈದ್ಯರು ಬಂದು ಔಷಧಿಕೊಟ್ಟು ವೈದ್ಯರೆ ಸುಸ್ತಾಗಿದ್ದಾರೆ. ಆದರೆ ರಾಜಕುಮಾರಿಗೆ ಗುಣವಾಗಲಿಲ್ಲ. ಅವಳು ರೋಗದಿಂದ ಬಳಲಿ ಆತ್ಮಹತ್ಯೆ ಮಾಡಿಕೊಳ್ಳಲು ಮಾಯಿಬೆಟ್ಟದ ಗವಿಯನ್ನು ಪ್ರವೇಶಿಸಲು ಬರುತ್ತಾಳೆ. ಅದೇ ಸಮಯದಲ್ಲಿ ಸಂಜೀವಶಿವ ನೋಡಿ ಇವಳನ್ನು ತಡೆಯುತ್ತಾನೆ.

**"ರಾಜಕುಮಾರಿ: ಸಾಯೋದಕ್ಕೆ ಅಂದರೆ ಪ್ರಾಣ ಕಳೆದುಕೊಳ್ಳೋದಕ್ಕೆ**

**ಸಂಜೀವಶಿವ: ಅಂಥಾದ್ದೇನಾಗಿದೆ ನಿನಗೆ?**

**ರಾಜಕುಮಾರಿ: "ಇನ್ನೇನಾಗಬೇಕು ಮಹಾಶಯಾ? ಕಣ್ಣಿಗೆ ಕಾಣಿಸೋದಿಲ್ಲವೆ? ಮುಖ ಬಿಳುಚಿದೆ, ತುಟಿ ಒಣಗಿವೆ, ಕಣ್ಣಲ್ಲಿ ಬೆಳಕಿಲ್ಲ ಮೂಳೆ ತುಂಬಿದ ಚೀಲದ ಹಾಗೆ ಕಾಣಿಸ್ತಿದ್ದೇನೆ ಸಾಲದ? ನೂರಾ ಎಂಟು ರೋಗಗಳವೆ ಸ್ವಾಮೀ. ಹದಿನೈದು ದಿನಗಳಿಂದ ಬಂದ ಜ್ವರ ಇಳಿದಿಲ್ಲ. ಅದಕ್ಕೆ ಜೀವ ಬೇಸರವಾಗಿ ಸಾಯೋದಕ್ಕೆ ಹೊರಟಿದ್ದೇನೆ"**[5].

ಸಾಯಲು ಹೊರಟವಳನ್ನು ತಾಯಿಯ ವಿರೋಧವಿದ್ದರು ಅವಳಿಗೆ ಗಿಡ ಮೂಲಿಕೆ ಕೊಟ್ಟು ಬದುಕಿಸುತ್ತಾನೆ. ರಾಜಕುಮಾರಿ ಸಂಜೀವಶಿವನನ್ನು ಪ್ರೀತಿಸುತ್ತಾಳೆ. ಸತ್ತರೆ ಒಮ್ಮೆ ಸಾಯೋಣ ಎಂದರೆ ನೀನು ಬದುಕು ನಾನು ಸತ್ತರೆ ಚಿಂತೆ ಇಲ್ಲ ಎಂದು ಹೇಳಿ ಉದಾತ್ತತೆಯನ್ನು ಮೆರೆಯುತ್ತಾಳೆ. ಸಂಜೀವಶಿವನಿಂದಲೇ ಆಯುಷ್ಯ ವೃದ್ಧಿಯಾಗಿ ಬದುಕುಳಿಯುತ್ತಾಳೆ.

**4 ಮದನತಿಲಕ:** ಸಂಜೀವಶಿವನ ವೈದ್ಯಶಾಲೆಗೆ ಮದನತಿಲಕ (ಶ್ಯಾಮಾ) ಎದೆ ನೋವಿನಿಂದ ಬರುತ್ತಾನೆ. ಈತನೊಬ್ಬ ಹಾಸ್ಯ ನಾಟಕಗಾರ ವೇಷಧಾರಿ ರಾಜಮನೆತನದಲ್ಲಿ ನಡೆಯುವ ನಾಟಕಗಳಲ್ಲಿ ಹಾಸ್ಯ ಪಾತ್ರವನ್ನು ಕಟ್ಟುತ್ತಾನೆ. ದಿನಕ್ಕೊಂದು ವೇಷಹಾಕಿ ನಾಟಕವಾಡುವವನಿಗೆ ದಿನಕ್ಕೊಂದು ಹೆಣ್ಣಿನ ಸವಾಸ ಈತನಿಗೆ ಎಂಬತ್ತರ ಸುತ್ತ ಮುತ್ತ ಇದ್ದರೂ ಮದುವೆಯ ಹುಚ್ಚುಹೋಗಿಲ್ಲ, ಮಂಜರಿಯನ್ನು ಮದುವೆಯಾದರೂ ಮದರಂಗಿಯನ್ನು ಆಸೆಪಡುತ್ತಾನೆ. ಸಂಜೀವಶಿವನಿಗೆ ಯೌವ್ವನ ವೃದ್ಧಿಯಾಗುವ ಔಷಧಿಕೊಡು ಎಂದು ದುಂಬಾಲು ಬಿದ್ದು ಬೇಡುತ್ತಾನೆ. ಸಂಜೀವಶಿವನ ಎದುರು ಹೆಂಡಂದಿರ ಕಪಟತನದ ಬಗ್ಗೆ ಈ ಕೆಳಗಿನಂತೆ ಮಾತನಾಡುತ್ತಾನೆ.

**"ಮದನತಿಲಕ: ವೈದ್ಯ ಮಹಾಶಯಾ, ಹೆಂಡಂದಿರ ವಿಷಯ ಇನ್ನೂ ಬ್ರಹ್ಮಚಾರಿಯಾಗಿರುವ ನಿನಗೇನು ಗೊತ್ತು? ಅವರ ಕಪಟ, ಅವರ ನಾಟಕ, ಅವರ ಮೋಸ, ಅವರ ಗೊಣಗಾಟ, ಒಂದೇ ಮಾತಿನಲ್ಲ ಅವರ ಬಗ್ಗೆ ಹೇಳಲಾ ಹುಡುಗ? ಒಟ್ಟಿನಲ್ಲಿ ಅವರ ದುಷ್ಟತನ ಅವರ ಚಂಚಲತನ, ಅವರ ಸುಳ್ಳುತನ, ಅವರ ಕಣ್ಣೀರ್ತನ, ಅವರ ಸೋಗಲಾಡಿತನ, ಅವರ ವಾಚಾಳತನ, ಅವರ…_"**[6] ಹೀಗೆ ಹೆಣ್ಣು ಮಕ್ಕಳ ಅಂತರ್ಯದ ವ್ಯಕ್ತಿತ್ವವನ್ನು ಹೇಳುತ್ತಾನೆ.

**5 ಮಾರ**: ಸಂಜೀವಶಿವನ ವೈದ್ಯಶಾಲೆಗೆ ಹೊಟ್ಟೆ ನೋವಿನಿಂದ ಬಳಲುತ್ತಾ ಬರುತ್ತಾನೆ. ಆದರೆ ಶೆಟವಿ ತಾಯಿ ಪ್ರತ್ಯಕ್ಷವಾಗುವುದು ಮಾರನಿಗೆ ಕಾಣುತ್ತದೆ. ಇದರಿಂದ ಸಂಜೀವಶಿವನಿಗೆ ಆಶ್ಚರ್ಯವಾಗುತ್ತದೆ. ತಾಯಿ ಈತನಿಗೆ ಹೇಗೆ ಕಂಡಳು ಎನ್ನುವುದು ಗೌಣವಾಗಿ ಉಳಿಯುತ್ತದೆ. ತಾಯಿ ದರ್ಶನವಾದ ಮೇಲೆ ಸಂಜೀವಶಿವನ ವೈದ್ಯ ಬೇಡವೆಂದು ಹೇಳಿ ಹೊರಟು ಹೋಗುತ್ತಾನೆ. **"ಸಂಜೀವಶಿವ: (ಮಾರನಿಗೆ) ಮದ್ದು ತಗೊಂಡು ಹೋಗು. ಮಾರ: ಮಗುವಿನ ಹೆಣಕ್ಕೆ ತಡವಾಗಬಾರದು ತಾಯಿಯ ಅಪ್ಪಣೆ ಆಯ್ತಲ್ಲ, ನಾರೋ ಬೇರೋ ಕುದಿಸಿ ಕುಡಿತಿನಿ ಬಿಡಪ್ಪ.." ಗಿಡ ಮೂಲಿಕೆಗಳ ಅವಶ್ಯಕತೆಯಿಲ್ಲವೆನ್ನುವಂತೆ ಮಾತನಾಡುತ್ತಾನೆ.**

ಸುಮಾರು ಇಪ್ಪತ್ತಕ್ಕಿಂತ ಹೆಚ್ಚು ಪಾತ್ರಗಳು ಬರುತ್ತವೆ. ನಾಟಕ ಪುಟ್ಟದಾಗಿ ಕಂಡರು ಸತ್ವಯುತವಾಗಿವೆ.

**ಅಡಿಟಿಪ್ಪಣಿಗಳು :**

1. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 8.
2. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 36.
3. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 8.
4. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 9.

5. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 27.
6. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು–15–16.
7. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 13.